ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ಬಿಡುಗಡೆಯಾಗಿಲ್ಲ.

ಆ) ಸಾಕ್ಷರತಾ ಆಂದೋಲನದಲ್ಲಿ (1991 ರಿಂದ 2000ರವರೆಗೆ) ಒಟ್ಟು 49,700 ಜನರನ್ನು ಸಾಕ್ಷರರನ್ನಾಗಿ ಮಾಡಲಾಗಿದೆ.

ಉಡುಪಿ ಜಿಲ್ಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಉಪನ್ಯಾಸಕರುಗಳ ಹುದ್ದೆಗಳನ್ನು ತುಂಬುವುದು.

1794(2605)

ಶ್ರೀ ಗೋಪಾಲ ಭಂಡಾರಿ ಹೆಚ್.(ಕಾರ್ಕಳ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಎಷ್ಟು ಹುದ್ದೆಗಳು (ಉಪನ್ಯಾಸಕರು) ತೆರವಾಗಿವೆ; ಹಾಗಿದ್ದಲ್ಲಿ ಅವುಗಳನ್ನು ತುಂಬಲು ಏನು ಕ್ರಮ ಕೈಗೊಳ್ಳಲಾಗಿದೆ.

ಆ) ಹುದ್ದೆಗಳನ್ನು ಭರ್ತಿ ಮಾಡುವ ತನಕ ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಬಹುದಲ್ಲವೆ?

Dr. G.PARAMESHWAR (Minister of State for Higher Education, Science & Technology):

ಅ) 17. ಇತರೆ ಕಾಲೇಜುಗಳಲ್ಲಿ ಕಾರ್ಯಭಾರದ ಕೊರತೆಯಿಂದ ಹೆಚ್ಚುವರಿಯಾಗಿರುವ ಉಪನ್ಯಾಸಕರುಗಳನ್ನು ವರ್ಗಾಯಿಸುವ ಮೂಲಕ ತುಂಬಲು ಕ್ರಮಕೈಗೊಳ್ಳಲಾಗುತ್ತಿದೆ.

ಆ) ಮೇಲ್ಕಂಡ ರೀತಿಯಲ್ಲಿ ಉಪನ್ಯಾಸಕರುಗಳನ್ನು ಭರ್ತಿ ಮಾಡಿ, ಉಳಿದ ಖಾಲಿ ಹುದ್ದೆಗಳಿಗೆ ಅರೆಕಾಲಿಕ ಉಪನ್ಯಾಸಕರುಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.